ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಐ.ಸಿ.ಎ.ಆರ್.-ಕೃಷಿ ವಿಜ್ಞಾನ ಕೇಂದ್ರ, ಉತ್ತರ ಕನ್ನಡ

ಬನವಾಸಿ ರಸ್ತೆ, ಶಿರಸಿ


# ಶುಂಠಿಯಲ್ಲಿ ಗಡ್ಡೆ ಕೊಳೆ ರೋಗದ ನಿರ್ವಹಣೆ

## ರೋಗದ ಲಕ್ಷಣಗಳು :

ರೋಗಕ್ಕೆ ತುತ್ತಾದ ಗಿಡಗಳ ಎಲೆಗಳ ತುದಿ ಭಾಗವು ಹಳದಿ ಬಣ್ಣಕ್ಕೆ ತಿರುಗಿ ಕ್ರಮೇಣ ಎಲೆ ಹಳದಿಯಾಗುತ್ತದೆ. ಆಮೇಲೆ ಗಿಡಗಳು ಬಾಡಿ ಒಣಗುತ್ತವೆ. ಗಿಡದ ಬುಡ ಭಾಗವು ತೇವಾಂಶಯುಕ್ತ ಕಂದು ಬಣ್ಣದಿಂದ ಕೂಡಿರುತ್ತದೆ ಆಮೇಲೆ ಮೃದುವಾಗಿ ನಂತರ ಕೊಳೆಯುತ್ತದೆ.


ಎಲೆಗಳು ಹಳದಿ ಬಣ್ಣಕ್ಕೆ ತಿರುಗಿರುವುದು.


ಗಡ್ಡೆಗಳು ಮೃದುವಾಗಿ ನಂತರ ಕೊಳೆಯುವುದು

## ನಿರ್ವಹಣಾ ಕ್ರಮಗಳು:

- ನಾಟಿಗಾಗಿ ಆರೋಗ್ಯವಂತ ಗಡ್ಡೆಗಳನ್ನು ಬಳಸುವುದು ಅತಿ ಮುಖ್ಯ.
- ಗಡ್ಡೆಕೊಳೆ ರೋಗದ ತೀವ್ರತೆ ಹೆಚ್ಚಿರುವ ಪ್ರದೇಶಗಳಲ್ಲಿ ಮಾರ್ಚ್ ತಿಂಗಳಲ್ಲಿ ನಾಟಿ ಮಾಡುವುದು ಸೂಕ್ತ.
- ನಾಟಿಗಾಗಿ ಚೆನ್ನಾಗಿ ನೀರು ಬಸಿದು ಹೋಗುವಂತಹ ಭೂಮಿಯನ್ನು ಆಯ್ಕೆ ಮಾಡಬೇಕು.
- ಪ್ರತಿ ಮಡಿಗೆ 1.5–2.0 ಅಡಿ ಆಳ ಹಾಗೂ ಒಳವಿನ್ಯಾಸ ಇಳಿಜಾರು ಇರುವ ಬಸಿಗಾಲುವೆ ನಿರ್ಮಿಸಬೇಕು.


ಕಳಪೆ ಬಸಿ ಕಾಲುವೆ

- ಎಲ್ಲ ಬಸಿಗಾಲುವೆಗಳನ್ನು ಉಪ ಮುಖ್ಯ ಬಸಿಕಾಲುವೆಗೆ ಹಾಗೂ ಉಪ ಮುಖ್ಯ ಬಸಿಗಾಲುವೆಗಳನ್ನು ಮುಖ್ಯ ಬಸಿಗಾಲುವೆಗೆ ಸೇರಿಸಬೇಕು. ಮುಖ್ಯ ಬಸಿಗಾಲುವೆಯ ಆಳ ಉಪ ಮುಖ್ಯ ಬಸಿಗಾಲುವೆಗಿಂತ ಹಾಗೂ ಉಪ ಮುಖ್ಯ ಬಸಿಗಾಲುವೆಗಳ ಆಳ ಬಸಿಗಾಲುವೆಗಳಿಗಿಂತ ಹೆಚ್ಚಾಗಿರಬೇಕು.
- ನಾಟಿಗೆ ಬಳಸುವ 1 ಕ್ವಿಂಟಾಲ್ ಬಿತ್ತನೆ ಶುಂಠಿ ತುಂಡುಗಳನ್ನು, 100 ಲೀಟರ್ ನೀರಿಗೆ 50 ಗ್ರಾಂ ಸ್ಟ್ರೆಪ್ಟೋಸೈಕ್ಲೀನ್ + 300 ಗ್ರಾಂ ಕಾಪರ್ ಆಕ್ಸಿಕ್ಲೋರೈಡ್ ಹಾಕಿ ತಯಾರಿಸಿದ ದ್ರಾವಣದಲ್ಲಿ 15–20 ನಿಮಿಷಗಳ ಕಾಲ ನೆನೆಸಿ ಹೊರ ತೆಗೆದು ನಂತರ ನಾಟಿ ಮಾಡಬೇಕು.


ಬೀಜೋಪಚಾರ

- ನಾಟಿ ಮಾಡುವಾಗ ಪ್ರತಿ ಎಕರೆ ಭೂಮಿಗೆ 1 ಕ್ವಿಂಟಾಲ್ ಬೇವಿನ ಹಿಂಡಿ ಜೊತೆಗೆ 1 ಕಿ. ಗ್ರಾಂ ಟ್ರೈಕೋಡರ್ಮಾ ಜೈವಿಕ ಶಿಲೀಂಧ್ರನಾಶಕ ಮಿಶ್ರಣ ಮಾಡಿ ಹಾಕಬೇಕು.
- ಶುಂಠಿ ಬೆಳೆಯಲ್ಲಿ ರೋಗಬಾಧೆ ಕಂಡು ಬಂದಲ್ಲಿ ರೋಗಗ್ರಸ್ಥ ಗಡ್ಡೆಗಳನ್ನು ತೆಗೆದು ಹಾಕಿ, ನಂತರ 2 ಗ್ರಾಂ ಮೆಟಲಾಕ್ಸಿಲ್ ಎಮ್. ಝಡ್ 72 ಡಬ್ಲ್ಯೂ. ಪಿ. + 2 ಗ್ರಾಂ ಬ್ಲೀಚಿಂಗ್ ಪೌಡರ್ ಅನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ತಯಾರಿಸಿದ ದ್ರಾವಣವನ್ನು ರೋಗ ಬಂದ ಮಡಿಗೆ ಹಾಗೂ ಸುತ್ತಮುತ್ತಲಿನ ಮಡಿಗಳಿಗೆ ಹಾಕಬೇಕು.